**ಗಾಂಧೀಜಿಯವರು ಅಸ್ಪೃಶ್ಯತೆಯ ಪ್ರಶ್ನೆಯ ವಿಷಯವಾಗಿ ಉಪವಾಸ ಕೈಕೊಳ್ಳುವ ವಿಷಯವನ್ನು ಮುಂಬಯಿ ಸರಕಾರಕ್ಕೆ 15ನೇ ಸೆಪ್ಟೆಂಬರ್ ದಿನ ಪತ್ರ ಬರೆದು ತಿಳಿಸಿದರು. ಅದನ್ನು ಸರಕಾರವು ಪ್ರಕಟಿಸಿತು.**



# ಅಸ್ಪೃಶ್ಯರ ಪ್ರಶ್ನೆ ನನ್ನ ಪ್ರಶ್ನೆ

## ಮುಂಬಯಿ ಸರಕಾರಕ್ಕೆ ಗಾಂಧೀಜಿ ಬರೆದ ಪತ್ರ

ಕಲೆ: ಜಬೀವುಲ್ಲಾ ಎಂ. ಅಸದ್

"**ದೇವರನ್ನು** ಸ್ಮರಿಸಿ, ಆತನ ಪ್ರೇರಣೆಯಿಂದ ಆತನ ಪ್ರೀತ್ಯರ್ಥವಾಗಿ ಈ ಉಪವಾಸವನ್ನು ಕೈಕೊಳ್ಳುತ್ತಿದ್ದೇನೆಂದು ನಮ್ರವಾಗಿ ಬಿನ್ನವಿಸುತ್ತೇನೆ. ಜನಸಂಘಟನೆಯ ದೃಷ್ಟಿಯಿಂದ ಉಪವಾಸದ ದಿನವನ್ನು ಮುಂದೂಡಲು ಮಿತ್ರರು ಸೂಚಿಸಿದ್ದಾರೆ. ಅದು ಶಕ್ಯವಿಲ್ಲ. ಮುಖ್ಯಮಂತ್ರಿಗಳಿಗೆ ನಾನು ತಿಳಿಸಿದ ಕಾರಣಕ್ಕಾಗಿ ವೇಳೆಯನ್ನು ಕೂಡ ಬದಲು ಮಾಡಲು ಶಕ್ಯವಿಲ್ಲ.

ಪರಕೀಯರೇ ಇರಲಿ, ಸ್ವದೇಶಿಯರೇ ಇರಲಿ, ಯಾರು ನನ್ನ ಮೇಲೆ ವಿಶ್ವಾಸವಿಟ್ಟಿರುವವರೋ ಅವರ ವಿರುದ್ಧ ಈ ಉಪವಾಸವಿದೆ. ಆದರೆ, ಇಂಗ್ಲಿಷ್ ಅಧಿಕಾರಿಗಳ ವಿರುದ್ಧ ಈ ಉಪವಾಸವಿರುವುದಿಲ್ಲ. ಈ ಅಧಿಕಾರಿ ವರ್ಗವು ವಿಪರೀತ ಕಲ್ಪನೆಯನ್ನು ಹರಡುತ್ತಿರುವಾಗಲೂ ಯಾವ ಅನೇಕ ಇಂಗ್ಲಿಷ್ ಸ್ತ್ರೀ ಪುರುಷರು ನನ್ನ ಬಗ್ಗೆ, ನನ್ನ ಕಾರ್ಯದ ನ್ಯಾಯಬುದ್ಧಿಯ ಬಗ್ಗೆ ವಿಶ್ವಾಸ ತಾಳಿರುವರೋ ಅವರ ವಿರುದ್ಧವಾಗಿ ಈ ಉಪವಾಸವಿರುತ್ತದೆ. ಆದುದರಿಂದ ನನ್ನಲ್ಲಿ ವಿಶ್ವಾಸವಿಲ್ಲದವರು ಹಿಂದಿಯರೇ ಇರಲಿ, ಪರಕೀಯರೇ ಇರಲಿ, ಅವರ ವಿರುದ್ಧ ಈ ಉಪವಾಸವಿಲ್ಲ. ಆದರೆ, ನನ್ನ ನ್ಯಾಯಬುದ್ಧಿಯ ಮೇಲೆ ವಿಶ್ವಾಸವಿದ್ದ ಹಿಂದೀಯರ ವಿರುದ್ಧ ಈ ಉಪವಾಸವಿದೆ. ಒಟ್ಟಿನಲ್ಲಿ ಸತ್ಯಧರ್ಮದ ಕಡೆಗೆ ಪ್ರವೃತ್ತಿಯುಂಟಾಗಬೇಕೆಂದೂ ಈ ಉಪವಾಸವು ಕೈಕೊಳ್ಳಲ್ಪಟ್ಟಿದೆ.

ಕೇವಲ ಭಾವನಾಪ್ರಧಾನನಾಗಿ ಇದನ್ನು ನಾನು ಸುರುವು ಮಾಡಿಲ್ಲ. ಶುದ್ಧ ಹಾಗೂ ನ್ಯಾಯವಾದ ತಕ್ಕಡಿಯಲ್ಲಿ ನನ್ನಲ್ಲಿದ್ದ ಸಾಮರ್ಥ್ಯವನ್ನೆಲ್ಲ ಹಚ್ಚಲು ಇದನ್ನು ಕೈಕೊಂಡಿದ್ದೇನೆ. ಆದುದರಿಂದ ನನ್ನ ಜೀವವನ್ನು ಉಳಿಸಲು ಹೆಚ್ಚು ಯೋಚನೆಯನ್ನು ಯಾರೂ ಮಾಡಬಾರದು. "ದೇವರ ಇಚ್ಛೆಯ ವಿರುದ್ಧ ಹುಲ್ಲುಕಡ್ಡಿಯು ಕೂಡ ಅಲ್ಲಾಡಲಾರದು" ಎಂಬ ಮಾತಿನಲ್ಲಿಯ ಸತ್ಯತೆಯ ಮೇಲೆ ನನಗೆ ಪೂರ್ಣ ವಿಶ್ವಾಸವಿದೆ. ಈ ದೇಹದಿಂದ ಇನ್ನೂ ಸೇವೆಯನ್ನು ತೆಗೆದುಕೊಳ್ಳುವ ಇಚ್ಛೆ ಆತನಿಗಿದ್ದರೆ, ಅವನು ರಕ್ಷಿಸಿಯೇ ರಕ್ಷಿಸುವನು. ಅವನ ಇಚ್ಛೆಯ ವಿರುದ್ಧ ಯಾರೂ ರಕ್ಷಣೆ ಮಾಡಲಾರರು. ನನ್ನ ಶರೀರವು ಇನ್ನೂ ಕೆಲದಿನ ಬಾಳುವ ಶಕ್ತಿಯುಳ್ಳದ್ದಿದೆ ಎಂದು ನನ್ನ ಅನುಭವವು ಹೇಳುತ್ತಿದೆ.

ಪ್ರತ್ಯೇಕ ಮತದಾರಸಂಘವು ನಮ್ಮ ಅಧಃಪತನದ ಕೊನೆಯ ಗಳಿಗೆ. ಈ ಸಮಯದಲ್ಲಿ ಸವರ್ಣ ಹಾಗೂ ಅಸ್ಪೃಶ್ಯ ಮುಂದಾಳುಗಳು

